# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ :: ರಾಮನಗರ ವಿಭಾಗ :: ರಾಮನಗರ

ಸಂ:ಕರಾಸಾ:ರಾನವಿ:ಸಂ:ವಾ: 782 : 21-22 ದಿನಾಂಕ:05.08:2021

## ಇ-ಟೆಂಡರ್ ಪ್ರಕಟಣೆ ಸಂ:05/2021-22

ಕರಾರಸಾ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು ಈ ಕೆಳಕಂಡ ಬಸ್ ನಿಲ್ದಾಣದಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ 05 ವರ್ಷಗಳವರೆಗೆ ಮತ್ತು ತೆರೆದ ಸ್ಥಳಕ್ಕೆ 03 ವರ್ಷಗಳವರೆಗೆ ಪರವಾನಿಗೆ ನೀಡಲು ಪ್ರಸ್ತುತ ನಿಗಮದ ಸಾ.ಸಾ.ಸ್ಥಾಯಿ ಆದೇಶ ಸಂ:787/2017, ದಿ:26.07.2017, ಸಂ:794/2018, ದಿ:09.08.2018 ಹಾಗೂ ನಿಗಮದ ಸಾ.ಸಾ.ಸ್ಥಾಯಿ ಆದೇಶ ಸಂ:809/2021, ದಿ:09.02.2021ರ ಅನ್ವಯದಂತೆ ಇ-ಟೆಂಡರ್ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾದ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ | ಬಸ್ ನಿಲ್ದಾಣ/ ಘಟಕದ ಹೆಸರು | ಮಳಿಗೆಯ ಹೆಸರು/ಮಳಿಗೆಯ ಸಂಖ್ಯೆ ವಿವರ | ವಿಸ್ತೀರ್ಣ (ಚ.ಅ) | ಮಿತವ್ಯಯ ಮಾಸಿಕ ಶುಲ್ಕ (ರೂ) | ಇ.ಎಂ.ಡಿ ಹಣವನ್ನು ಸಲ್ಲಿಸಬೇಕಾಗಿರುವ ವಿವರ | | | ಅರ್ಜಿ - ಜಿಎಸ್‌ಟಿ., ಶುಲ್ಕ ರೂ. |
|---|---|---|---|---|---|---|---|---|
| | | | | | ನಿಗದಿ- ಪಡಿಸಿರುವ ಇ.ಎಂ.ಡಿ. ಹಣ ರೂ. | ಇ-ಪೋರ್ಟಲ್ ಮುಖೇನ ಪಾವತಿಸುವ ಮೊತ್ತ ರೂ. | ವಿಭಾಗೀಯ ಕಛೇರಿಗೆ ನಿಗದಿತ ಅವಧಿಯಲ್ಲಿ ಡಿ.ಡಿ., ಮೂಲಕ ಖುದ್ದಾಗಿ ಸಲ್ಲಿಸಬೇಕಾದ ಮೊತ್ತ ರೂ. | |
| 1 | ಆನೇಕಲ್ ಘಟಕ | ಜನರಲ್ ಮಳಿಗೆ (ಸಂ:05) (ದಿ:25.10.2021ರಿಂದ ಜಾರಿಗೆ ಬರುವಂತೆ) | 138 | 10000/- | 30000/- | 500/- | 29500/- | 118/- |
| 2 | ಆನೇಕಲ್ ಘಟಕ | ಜನರಲ್ ಮಳಿಗೆ (ಸಂ:11) (ದಿ:15.11.2021ರಿಂದ ಜಾರಿಗೆ ಬರುವಂತೆ) | 138 | 10000/- | 30000/- | 500/- | 29500/- | 118/- |
| 3 | ಆನೇಕಲ್ ಘಟಕ | ಜನರಲ್ ಮಳಿಗೆ (ಸಂ:12) | 138 | 12102/- | 36306/- | 500/- | 35806/- | 143/- |
| 4 | ಚನ್ನಪಟ್ಟಣ | ಜನರಲ್ ಮಳಿಗೆ (ಸಂ:19) (ಅಂಗವಿಕಲರಿಗೆ ಮೀಸಲು) (ದಿ:24.10.2021 ರಿಂದ ಜಾರಿಗೆ ಬರುವಂತೆ) | 166 | 23865/- | 71595/- | 500/- | 71095/- | 282/- |
| 5 | ಚನ್ನಪಟ್ಟಣ | ದ್ವಿ ಚಕ್ರ ಹಾಗೂ ಕಾರು ನಿಲ್ದಾಣದ ನಿರ್ವಹಣೆ (ಸಂ.40) (ತೆರೆದ ಸ್ಥಳ) (ದಿ:01.10.2021ರಿಂದ ಜಾರಿಗೆ ಬರುವಂತೆ) | 15110.71 | 140158/- | 420474/- | 500/- | 419974/- | 1654/- |
| 6 | ಚನ್ನಪಟ್ಟಣ | ಜನರಲ್ ಮಳಿಗೆ (ಸಂ:07) (ಅಂಗವಿಕಲರಿಗೆ ಮೀಸಲು) (ದಿ:01.01.2022 ರಿಂದ ಜಾರಿಗೆ ಬರುವಂತೆ) | 166 | 32440/- | 97320/- | 500/- | 96820/- | 383/- |
| 7 | ಕನಕಪುರ | ಜನರಲ್ ಮಳಿಗೆ (ಸಂ:04) (ದಿ:01.12.2021ರಿಂದ ಜಾರಿಗೆ ಬರುವಂತೆ) | 100 | 14641/- | 43923/- | 500/- | 43423/- | 172/- |
| 8 | ಕನಕಪುರ | ಜನರಲ್ ಮಳಿಗೆ (ಸಂ:07) (ದಿ:01.12.2021ರಿಂದ ಜಾರಿಗೆ ಬರುವಂತೆ) | 100 | 9801/- | 29403/- | 500/- | 28903/- | 118/- |

ಮುಂದುವರೆದಂತೆ-2

1) ರಾಮನಗರ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ದಿ:27.08.2021ರಂದು ಇ-ಟೆಂಡರ್ ನಡೆಸಲು ನಿಗಧಿಪಡಿಸಲಾಗಿರುತ್ತದೆ. ದಿ:05.08.2021 ರಿಂದ ಇ-ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ-ಟೆಂಡರ್ ದಸ್ತಾಮೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ:25.08.2021ರ ಮಧ್ಯಾಹ್ನ 14:00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ. ಇ-ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಹಾಗೂ ಅರ್ಜಿದಾರರ ಅರ್ಜಿ ಶುಲ್ಕ, ಇಎಂಡಿ., ಶುಲ್ಕದ ಮೂಲ ಡಿ.ಡಿ.ಗಳನ್ನು ರಾಮನಗರ ವಿಭಾಗೀಯ ಕಛೇರಿಗೆ ದಿ:26.08.2021ರ ಸಮಯ 10:00 ರಿಂದ 26.08.2021ರ ಸಮಯ 17:00 ರವರೆಗೆ ಸಲ್ಲಿಸಬೇಕು.

| ಕ್ರಸ. | ವಿವರ | ದಿನಾಂಕ | ಸಮಯ |
|---|---|---|---|
| 1 | ಟೆಂಡರ್ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಪ್ರಕ್ರಿಯೆ ಪ್ರಾರಂಭ | 05.08.2021 | - |
| 2 | ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ ಮತ್ತು ಸಮಯ (ಯಾವುದೇ ತಾಂತ್ರಿಕದೋಷ ಇಲ್ಲದಿದ್ದಲ್ಲಿ) | 25.08.2021 | 1400 |
| 3 | ಟೆಂಡರ್ ತೆರೆಯುವ ಸಮಯ | 27.08.2021 | 1400 |

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ-562159 ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂ.ಸಂ:080-27272306 ಹಾಗೂ ವಿಭಾಗ ಸಂಚಲನಾಧಿಕಾರಿಗಳ ಮೊಬೈಲ್ ಸಂ:77609 90852. ಟೆಂಡರನ್ನು ನಡೆಸುವ ಮತ್ತು ರದ್ದುಪಡಿಸುವ ಹಾಗೂ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಮಾರ್ಪಡಿಸುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ: ರಾಮನಗರ

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ :: ರಾಮನಗರ ವಿಭಾಗ :: ರಾಮನಗರ

ಸಂ:ಕರಾಸಾ:ರಾನವಿ:ಸಂ:ವಾ: 782:21-22 ದಿನಾಂಕ:05.08.2021

**ಇ-ಟೆಂಡರ್ ಪ್ರಕಟಣೆ ಸಂ:05/2021-22**

ಕರಾರಸಾ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು ಈ ಕೆಳಕಂಡ ಬಸ್ ನಿಲ್ದಾಣದಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ 05 ವರ್ಷಗಳವರೆಗೆ ಮತ್ತು ತೆರೆದ ಸ್ಥಳಕ್ಕೆ 03 ವರ್ಷಗಳವರೆಗೆ ಪರವಾನಿಗೆ ನೀಡಲು ಪ್ರಸ್ತುತ ನಿಗಮದ ಸಾ.ಸಾ.ಸ್ಥಾಯಿ ಆದೇಶ ಸಂ:787/2017, ದಿ:26.07.2017, ಸಂ:794/2018, ದಿ:09.08.2018 ಹಾಗೂ ನಿಗಮದ ಸಾ.ಸಾ.ಸ್ಥಾಯಿ ಆದೇಶ ಸಂ:809/2021, ದಿ:09.02.2021ರ ಅನ್ವಯದಂತೆ ಇ-ಟೆಂಡರ್ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾದ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ | ಬಸ್ ನಿಲ್ದಾಣ/ ಘಟಕದ ಹೆಸರು | ಮಳಿಗೆಯ ಹೆಸರು/ಮಳಿಗೆಯ ಸಂಖ್ಯೆ ವಿವರ | ವಿಸ್ತೀರ್ಣ (ಚ.ಅ) | ಮಿತವ್ಯಯ ಮಾಸಿಕ ಶುಲ್ಕ (ರೂ) | ಇ.ಎಂ.ಡಿ ಹಣವನ್ನು ಸಲ್ಲಿಸಬೇಕಾಗಿರುವ ವಿವರ | | | ಅರ್ಜಿ - ಜಿಎಸ್‌ಟಿ., ಶುಲ್ಕ ರೂ. |
|---|---|---|---|---|---|---|---|---|
| | | | | | ನಿಗದಿ-ಪಡಿಸಿರುವ ಇ.ಎಂ.ಡಿ. ಹಣ ರೂ. | ಇ-ಪೋರ್ಟಲ್ ಮುಖೇನ ಪಾವತಿಸುವ ಮೊತ್ತ ರೂ. | ವಿಭಾಗೀಯ ಕಛೇರಿಗೆ ನಿಗದಿತ ಅವಧಿಯಲ್ಲಿ ಡಿ.ಡಿ., ಮೂಲಕ ಖುದ್ದಾಗಿ ಸಲ್ಲಿಸಬೇಕಾದ ಮೊತ್ತ ರೂ. | |
| 1 | ಆನೇಕಲ್ ಘಟಕ | ಜನರಲ್ ಮಳಿಗೆ (ಸಂ:05) (ದಿ:25.10.2021ರಿಂದ ಜಾರಿಗೆ ಬರುವಂತೆ) | 138 | 10000/- | 30000/- | 500/- | 29500/- | 118/- |
| 2 | ಆನೇಕಲ್ ಘಟಕ | ಜನರಲ್ ಮಳಿಗೆ (ಸಂ:11) (ದಿ:15.11.2021ರಿಂದ ಜಾರಿಗೆ ಬರುವಂತೆ) | 138 | 10000/- | 30000/- | 500/- | 29500/- | 118/- |
| 3 | ಆನೇಕಲ್ ಘಟಕ | ಜನರಲ್ ಮಳಿಗೆ (ಸಂ:12) | 138 | 12102/- | 36306/- | 500/- | 35806/- | 143/- |
| 4 | ಚನ್ನಪಟ್ಟಣ | ಜನರಲ್ ಮಳಿಗೆ (ಸಂ:19) (ಅಂಗವೀಕಲರಿಗೆ ಮೀಸಲು) (ದಿ:24.10.2021 ರಿಂದ ಜಾರಿಗೆ ಬರುವಂತೆ) | 166 | 23865/- | 71595/- | 500/- | 71095/- | 282/- |
| 5 | ಚನ್ನಪಟ್ಟಣ | ದ್ವಿ ಚಕ್ರ ಹಾಗೂ ಕಾರು ನಿಲ್ದಾಣದ ನಿರ್ವಹಣೆ (ಸಂ.40) (ತೆರೆದ ಸ್ಥಳ) (ದಿ:01.10.2021ರಿಂದ ಜಾರಿಗೆ ಬರುವಂತೆ) | 15110.71 | 140158/- | 420474/- | 500/- | 419974/- | 1654/- |
| 6 | ಚನ್ನಪಟ್ಟಣ | ಜನರಲ್ ಮಳಿಗೆ (ಸಂ:07) (ಅಂಗವೀಕಲರಿಗೆ ಮೀಸಲು) (ದಿ:01.01.2022 ರಿಂದ ಜಾರಿಗೆ ಬರುವಂತೆ) | 166 | 32440/- | 97320/- | 500/- | 96820/- | 383/- |
| 7 | ಕನಕಪುರ | ಜನರಲ್ ಮಳಿಗೆ (ಸಂ:04) (ದಿ:01.12.2021ರಿಂದ ಜಾರಿಗೆ ಬರುವಂತೆ) | 100 | 14641/- | 43923/- | 500/- | 43423/- | 172/- |
| 8 | ಕನಕಪುರ | ಜನರಲ್ ಮಳಿಗೆ (ಸಂ:07) (ದಿ:01.12.2021ರಿಂದ ಜಾರಿಗೆ ಬರುವಂತೆ) | 100 | 9801/- | 29403/- | 500/- | 28903/- | 118/- |

★ **ಸೂಚನೆಗಳು:-**

2) ಪ್ರತಿ ವರ್ಷ ಹಿಂದಿನ ಪರವಾನಗಿ ಶುಲ್ಕದ ಮೇಲೆ ಶೇ.10%ರಷ್ಟು ಹೆಚ್ಚಾಗುವುದು.

3) ಇ.ಎಂ.ಡಿ. ಹಾಗೂ ಭದ್ರತಾ ಠೇವಣಿ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

4) ಆಯ್ಕೆಗೊಂಡ ಪರವಾನಗಿದಾರರ ಇ.ಎಂ.ಡಿ. ಮೊತ್ತವನ್ನು ಭದ್ರತಾ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಂಡು, ಉಳಿಕೆ ಮೊತ್ತವನ್ನು ಪಾವತಿಸಿಕೊಳ್ಳುವುದು.

5) ಬಿಡ್‌ದಾರರು ನಿಗಧಿಪಡಿಸಿರುವ ಇಎಂಡಿ., ಹಾಗೂ ಅರ್ಜಿ ಶುಲ್ಕದ ಡಿ.ಡಿ.ಯ ಜೆರಾಕ್ಸ್ ಪ್ರತಿಯನ್ನು ನಿಗದಿತ ಅವಧಿಯಲ್ಲಿ ಇ-ಪೋರ್ಟಲ್‌ನಲ್ಲಿ ಇತರೆ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡಬೇಕು.

6) ಇ-ಪೋರ್ಟಲ್‌ನಲ್ಲಿ ಮಳಿಗೆಗಳ ಸಂಪೂರ್ಣ ವಿವರ, ಟೆಂಡರ್‌ದಾರರು ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು, ಅರ್ಹತಾ ಮಾನದಂಡಗಳು, ಮಳಿಗೆಯ ನಕ್ಷೆ ಹಾಗೂ ಸಂಬಂಧಿಸಿದ ಎಲ್ಲಾ ವಿವರಗಳನ್ನು ಅಪ್‌ಲೋಡ್ ಮಾಡಲಾಗಿರುತ್ತದೆ. ಈ ಎಲ್ಲಾ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ಪ್ರತಿಯಲ್ಲಿ, ಟೆಂಡರ್‌ದಾರರು ಸಹಿ ಮಾಡಿ, ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.

ಮುಂದುವರೆದಂತೆ-2



7) ಬಿಡ್‌ದಾರರು ಮಳಿಗೆಗಳಿಗೆ ತಮ್ಮ ಬಿಡ್‌ನ್ನು ಸಲ್ಲಿಸುವ ಮೊದಲು ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತವನ್ನು ದಾಖಲಿಸುವುದು, ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ಮಳಿಗೆಯ ವ್ಯವಹಾರ/ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

8) **ಮೀಸಲಾತಿ ಬಯಸುವ ಬಿಡ್‌ದಾರರು ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು.**

**9)** ಬಿಡ್‌ದಾರರು ನಿಗದಿತ ಇ.ಎಂ.ಡಿ. ಮೊತ್ತದಲ್ಲಿ ರೂ.500/- ಇ-ಪೋರ್ಟಲ್ ಮುಖೇನ ಪಾವತಿಸುವುದು. ಇನ್ನುಳಿದ ಇ.ಎಂ.ಡಿ. ಮೊತ್ತವನ್ನು ಡಿ.ಡಿ. ರೂಪದಲ್ಲಿ ಪಡೆದು **ದಿ:26.08.2021ರ ಸಮಯ 10:00 ರಿಂದ 26.08.2021ರ ಸಮಯ 17:00 ರವರೆಗೆ ಖುದ್ದಾಗಿ ಸಲ್ಲಿಸುವುದು. ರಾಮನಗರ ವಿಭಾಗೀಯ ಕಛೇರಿಗೆ ಸಲ್ಲಿಸಬೇಕು. ಸದರಿ ಡಿ.ಡಿ.ಯ ಜೆರಾಕ್ಸ್ ಪ್ರತಿಯನ್ನು ಇ-ಪೋರ್ಟಲ್‌ನಲ್ಲಿ ಇತರೆ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡುವುದು.**

10) ಬಿಡ್‌ದಾರರು ಒಂದು ಮಳಿಗೆಗೆ ಒಂದಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

11) ಒಂದು ವೇಳೆ ಬಿಡ್‌ದಾರರು ಇ-ಪೋರ್ಟ್‌ಲ್‌ನ ಆರ್ಥಿಕ ಬಿಡ್‌ನಲ್ಲಿ ಮತ್ತು ನಿಗದಿತ ನಮೂನೆಯಲ್ಲಿ ನಮೂದಿಸಿದ ಬಿಡ್ ಮೊತ್ತ ಬೇರೆ ಬೇರೆ ಆಗಿದ್ದಲ್ಲಿ, ಇ-ಪೋರ್ಟ್‌ಲ್‌ನ ಆರ್ಥಿಕ ಬಿಡ್ ಮೊತ್ತವನ್ನು ಪರಿಗಣಿಸಲಾಗುವುದು.

12) ಬಿಡ್‌ದಾರರ ಷರತ್ತಿನ ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಟೆಂಡರ್ ನಿಯಮಗಳನ್ನು ಪಾಲಿಸಿರುವ ಅರ್ಹ ಟೆಂಡರ್‌ಗಳನ್ನು ಮಾತ್ರ ಅಂಗೀಕರಿಸುವುದು.

13) **ಇ-ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಹಾಗೂ ಅರ್ಜಿದಾರರ ಅರ್ಜಿ ಸುಲ್ಕ, ಇಎಂಡಿ., ಶುಲ್ಕದ ಮೂಲ ಡಿ.ಡಿ.ಗಳನ್ನು ರಾಮನಗರ ವಿಭಾಗೀಯ ಕಛೇರಿಗೆ ದಿ:26.08.2021ರ ಸಮಯ 10:00 ರಿಂದ 26.08.2021ರ ಸಮಯ 17:00 ರವರೆಗೆ ಸಲ್ಲಿಸಬೇಕು.**

14) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಮಳಿಗೆಗಳಲ್ಲಿ, ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ. ನಾಲ್ಕು ರಾಜ್ಯ ಸಾರಿಗೆ ನಿಗಮ / ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆ / ಜಾಹೀರಾತು ಪರವಾನಗಿಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ **ಸ್ವಯಂ-ದೃಢೀಕರಣವನ್ನು ಬಿಡ್‌ದಾರರು ಇ-ಟೆಂಡರ್‌ನಲ್ಲಿ ನಿಗಧಿತ ಅವಧಿಯಲ್ಲಿ ಅಪ್‌ಲೋಡ್ ಮಾಡಬೇಕು.** ಈ ನಿಯಮವನ್ನು ಬಿಡ್‌ದಾರರು ಉಲ್ಲಂಘಿಸಿರುವುದು, ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ, ಇ.ಎಂ.ಡಿ./ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ / ಕರಾರನ್ನು ರದ್ದುಗೊಳಿಸಲಾಗುವುದು.

15) ಅಂಧರು ಮತ್ತು ವಿಕಲಚೇತನರಿಗೆ ಮೀಸಲಿಟ್ಟ ಮಳಿಗೆಗಳನ್ನು, ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ. ನಾಲ್ಕು ರಾಜ್ಯ ಸಾರಿಗೆ ನಿಗಮ / ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆಗಳ ಪರವಾನಗಿಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ **ಸ್ವಯಂ-ದೃಢೀಕರಣವನ್ನು ಬಿಡ್‌ದಾರರು ಇ-ಟೆಂಡರ್‌ನಲ್ಲಿ ನಿಗಧಿತ ಅವಧಿಯಲ್ಲಿ ಅಪ್‌ಲೋಡ್ ಮಾಡಬೇಕು.** ಈ ನಿಯಮವನ್ನು ಬಿಡ್‌ದಾರರು ಉಲ್ಲಂಘಿಸಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ, ಇ.ಎಂ.ಡಿ/ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ/ಕರಾರನ್ನು ರದ್ದುಗೊಳಿಸಲಾಗುವುದು.

16) ವಿಕಲಚೇತನ ಅರ್ಜಿದಾರರು ಕನಿಷ್ಟ ಶೇ.40/- ರಷ್ಟು ಅಂಗವಿಕಲತೆಯನ್ನು ಹೊಂದಿರಬೇಕು. ಸಂಪೂರ್ಣ ಅಂಧ, ಕಿವುಡು ಹಾಗೂ ಮೂಕ ಅಭ್ಯರ್ಥಿಗಳು ಸಹ ಅರ್ಜಿಸಲ್ಲಿಸಬಹುದಾಗಿದೆ. ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಭಾವಚಿತ್ರ ಇರುವ ಅಂಗವಿಕಲತೆಯ ಚಾಲ್ತಿಯಿರುವ ಪುಸ್ತಕ/ಪ್ರಮಾಣ ಪತ್ರವನ್ನು ಮತ್ತು ಅಂಗವಿಕಲತೆಯ ಭಾವಚಿತ್ರವನ್ನು ಅರ್ಜಿಯೊಂದಿಗೆ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಆಯ್ಕೆಯಾದ ಅಭ್ಯರ್ಥಿಯು ತಾವು ಅಪ್ ಲೋಡ್ ಮಾಡಿರುವ ಮೂಲ ಪ್ರತಿಗಳನ್ನು ಸಲ್ಲಿಸುವುದು.

17) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಇರಿಸುವ ವಾಣಿಜ್ಯ ಮಳಿಗೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ತಾಲ್ಲೂಕು ತಹಶಿಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರ ದೃಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಆಯ್ಕೆಯಾದ ಅಭ್ಯರ್ಥಿಯು ತಾವು ಅಪ್ ಲೋಡ್ ಮಾಡಿರುವ ಮೂಲ ಪ್ರತಿಗಳನ್ನು ಸಲ್ಲಿಸುವುದು.

18) ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಶುಲ್ಕವನ್ನು, ಪ್ರಸ್ತುತ ಶೇ.18, ಮುಂಗಡವಾಗಿ ನಿಗಮಕ್ಕೆ ಪಾವತಿಸಬೇಕು.

19) ಆಯ್ಕೆಗೊಂಡ ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು ಮತ್ತು ಸೇವಾ ತೆರಿಗೆ ಪಾವತಿಸಲು ಇನ್‌ವಾಯ್ಸ್ ಅನ್ನು ಪ್ರತಿ ತಿಂಗಳ 3ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕ/ವಿಭಾಗೀಯ ಕಛೇರಿಯಲ್ಲಿ ಪಡೆಯುವುದು.

20) ಇನ್‌ವಾಯ್ಸ್‌ನಲ್ಲಿ ನಮೂದಿಸಿದ ಪೂರ್ಣ ಮೊತ್ತವನ್ನು ಪರವಾನಗಿದಾರರು ಪಾವತಿಸಬೇಕಿರುತ್ತದೆ. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು - ಸೇವಾ ತೆರಿಗೆ ಮೇಲೂ ವಾರ್ಷಿಕ ಶೇ.18 ರಷ್ಟು ಬಡ್ಡಿಯನ್ನು ಕನಿಷ್ಠ ರೂ.100/- ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ಸಂದಾಯ ಮಾಡಬೇಕು.

21) ಮಾಸಿಕ ಪರವಾನಗಿ ಶುಲ್ಕವು ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳವಾಗುವುದು. ಇದಕ್ಕನುಗುಣವಾಗಿ ಸರಕು - ಸೇವಾ ತೆರಿಗೆಯು ಹೆಚ್ಚಳವಾಗುವುದು.

ಮುಂದುವರೆದಂತೆ-3



22) ನಿಗಮದ ಕೊಳವೆ ಬಾವಿಗಳಿಂದ ನೀರಿನ ಸೌಲಭ್ಯವನ್ನು ಕಲ್ಪಿಸಿರುವಂತಹ ಮಳಿಗೆಗಳ ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕದ ಶೇ.2%ರಷ್ಟು ಅಥವಾ ಕೊಳವೆ ಬಾವಿಯ ವಿದ್ಯುತ್ ಬಿಲ್ಲಿನ ಶೇ.50 ರಷ್ಟು, ಇದರಲ್ಲಿ ಯಾವುದು ಹೆಚ್ಚಿನದು, ಆ ಮೊತ್ತವನ್ನು ಪಾವತಿಸಬೇಕು.

23) ಒಂದು ವೇಳೆ ಮಳಿಗೆಗಳಿಗೆ ಜಲಮಂಡಳಿ / ಸಂಬಂಧಿಸಿದ ಇಲಾಖೆಗಳಿಂದ ಪ್ರತ್ಯೇಕವಾಗಿ ನೀರಿನ ಮೀಟರ್ ಅಳವಡಿಸಿದ್ದಲ್ಲಿ, ಅಂತಹ ಮಳಿಗೆಯ ಪರವಾನಗಿದಾರರು ಅನ್ವಯಿಸುವ ನೀರಿನ ಶುಲ್ಕವನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸಬೇಕು.

24) ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳನ್ನು ನಿಗದಿತ ಸಮಯದಲ್ಲಿ ಪಾವತಿಸಬೇಕು.

25) ಒಂದು ವೇಳೆ ನಿಗಮದ ವತಿಯಿಂದ ನೀರಿನ ಸರಬರಾಜು ಮಾಡಲು ಸಾಧ್ಯವಾಗದಿದ್ದಲ್ಲಿ, ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಿರುತ್ತದೆ.

26) ಪರವಾನಗಿದಾರರು ಕೊಳವೆ ಬಾವಿ (Borewell) ಕೊರೆಸಲು ಅನುಮತಿ ಕೋರಿದಲ್ಲಿ, ಸ್ಥಳೀಯ ಸಂಸ್ಥೆಗಳ ನಿಯಮಾವಳಿಗಳು, ವಾಣಿಜ್ಯ ಸ್ಥಳ, ಬಸ್ ನಿಲ್ದಾಣದಲ್ಲಿ ಹಾಲಿ ಇರುವಂತಹ ಬೋರ್‌ವೆಲ್‌ಗಳ ಆಧಾರದಲ್ಲಿ ನಿರ್ಧರಿಸಲಾಗುವುದು. ನಿಗಮದ ತೀರ್ಮಾನಕ್ಕೆ ಪರವಾನಗಿದಾರರು ಬದ್ಧರಾಗಿರಬೇಕು.

27) <u>ಅನಧಿಕೃತವಾಗಿ ಹೆಚ್ಚುವರಿ ಸ್ಥಳಾವಕಾಶದ ಬಳಕೆ</u>:- ಪರವಾನಗಿದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಳಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಿಸಬೇಕು. ಇದಲ್ಲದೆ, ಪರವಾನಗಿದಾರರಿಗೆ ಕೆಳಕಂಡಂತೆ ದಂಡ ವಿಧಿಸಲಾಗುವುದು ಹಾಗೂ ಕರಾರನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳುವುದು.

| | | |
|---|---|---|
| ಮೊದಲ ಬಾರಿಗೆ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 3 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು |

| | | |
|---|---|---|
| | | ದಿನಗಳಿಗೆ ವಿಧಿಸಲಾಗುವುದು. |
| ಎರಡನೇ ಬಾರಿಗೆ ಹಾಗೂ ಪುನರಾವರ್ತ-ನೆಗೊಂಡಲ್ಲಿ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು. ಇದಲ್ಲದೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗವುದು. |

೨೮) ಪರವಾನಗಿ ಪಡೆದ ಮಳಿಗೆಗಳಲ್ಲಿ ಟೆಂಡರ್‌ನಲ್ಲಿ ನಿಗದಿಪಡಿಸಿದ ವ್ಯವಹಾರವನ್ನು ಹೊರತುಪಡಿಸಿ ಇತರೆ ವ್ಯವಹಾರವನ್ನು ನಡೆಸಲು ಅವಕಾಶವಿರುವುದಿಲ್ಲ.

೨೯) ಜನರಲ್ ಸ್ಟಾಲ್‌ಗಳಿಗೆ ಆಯ್ಕೆಯಾದ ಪರವಾನಗಿದಾರರು, ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡಬೇಕಿರುತ್ತದೆ. ಮಾರಾಟ ಮಾಡಲು ನಿಷೇಧಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡುವಂತಿಲ್ಲ. ಸದರಿ ಪಟ್ಟಿಯ ಹೊರತಾಗಿ ಇರುವ ವಸ್ತುಗಳನ್ನು ಮಾರಾಟ ಮಾಡಬೇಕಿದ್ದಲ್ಲಿ, ಪರವಾನಗಿದಾರರು ಕರಾರಿಗೂ ಮುಂಚಿತವಾಗಿ ನಿಗಮದಿಂದ ಪೂರ್ವಾನುಮತಿ ಪಡೆಯಬೇಕಿರುತ್ತದೆ. ವಿಭಾಗದ ಅಧಿಕಾರಿಗಳು ಅನುಮತಿ ನೀಡುವ ಮುನ್ನ, ಸದರಿ ವಸ್ತುಗಳ ಮಾರಾಟದಿಂದ ಇತರೆ ಮಳಿಗೆಗಳ ವ್ಯವಹಾರಕ್ಕೆ ನಷ್ಟ ಆಗುವುದಿಲ್ಲ, ಎಂಬುದನ್ನು ದೃಢೀಕರಿಸಿಕೊಡಬೇಕು.

| ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಬಹುದಾದ ವಸ್ತು / ಪದಾರ್ಥಗಳು | ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಲು ನಿಷೇಧಿಸಿರುವ ವಸ್ತು / ಪದಾರ್ಥಗಳು |
|---|---|
| ಪುಸ್ತಕ / ದಿನಪತ್ರಿಕೆ / ನಿಯತಕಾಲಿಕೆಗಳು ಮತ್ತು ಸ್ಟೇಷನರಿ ವಸ್ತುಗಳು, ಮಾರ್ಜಕ / ಸಾಬೂನುಗಳು ಹಣ್ಣು / ಹೂಗಳು, ಜೆರಾಕ್ಸ್, ಪ್ಯಾಕ್ ಆಗಿರುವ ಬಿಸ್ಕೆಟ್ಸ್ / ಜ್ಯೂಸ್, ಬೇಕರಿ ತಿನಿಸುಗಳು, ನೀರಿನ ಬಾಟಲ್, ಮೊಬೈಲ್ ಕರೆನ್ಸಿ, ಸೌಂದರ್ಯವರ್ಧಕಗಳು, ಅಲಂಕಾರಿಕ ವಸ್ತುಗಳು, ಕೊಡುಗೆ ನೀಡುವ ವಸ್ತುಗಳು, ಫ್ಯಾನ್ಸಿ ಸ್ಟೋರ್‌ನಲ್ಲಿ ಮಾರಾಟ ಮಾಡುವ ವಸ್ತುಗಳು, | ಬೇಯಿಸಿದ ಪದಾರ್ಥಗಳಾದ ಕಾಫಿ, ಟೀ, ಉಪಹಾರ, ಊಟ, ಹಾಲು ಇತ್ಯಾದಿಗಳು, ಔಷಧಿಗಳು, ದೂರವಾಣಿ ಬೂತ್, ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಕಾನೂನು ಬಾಹಿರವಾಗಿರುವ ಪಟಾಕಿ, ಗನ್ನುಗಳು, ಸಿಡಿಮದ್ದುಗಳು, ತಂಬಾಕುಯುಕ್ತ ಪದಾರ್ಥಗಳು, ಮದ್ಯದ ಮಾರಾಟ, ಸೀಮೆಎಣ್ಣೆ, ಡೀಸೆಲ್, ಪೆಟ್ರೋಲ್ - ಗ್ಯಾಸ್, ಗ್ಯಾಸ್ ಸಿಲಿಂಡರ್, ಟ್ರಾವೆಲ್ / ಟ್ರಾನ್ಸ್‌ಪೋರ್ಟ್ ಏಜೆನ್ಸಿ, ಟಿಕೇಟ್ ಬುಕಿಂಗ್, ಇತ್ಯಾದಿ ಕಾನೂನು ಮತ್ತು ನಿಗಮದ ವತಿಯಿಂದ ನಿಷೇಧಿಸಲ್ಪಟ್ಟ ಹಾಗೂ ಮುಂದೆ ನಿಷೇಧಿಸಲ್ಪಡುವ ವಸ್ತುಗಳು. ಈ ಮಳಿಗೆಗಳಲ್ಲಿ ಗ್ಯಾಸ್ / ಸ್ಟೌವ್ ಬಳಕೆಗೆ ಅವಕಾಶವಿಲ್ಲ. |

ಮುಂದುವರೆದಂತೆ–4



೩೦) ಉಪಹಾರ ಗೃಹ ಮಳಿಗೆಗೆ ಆಯ್ಕೆಯಾದ ಪರವಾನಗಿದಾರರು, ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡಬೇಕಿರುತ್ತದೆ. ಮಾರಾಟ ಮಾಡಲು ನಿಷೇಧಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡುವಂತಿಲ್ಲ.

| ಉಪಹಾರ ಗೃಹ ಮಳಿಗೆಯಲ್ಲಿ ಮಾರಾಟ ಮಾಡಬಹುದಾದ ವಸ್ತು / ಪದಾರ್ಥಗಳು | ಉಪಹಾರ ಗೃಹ ಮಳಿಗೆಯಲ್ಲಿ ಮಾರಾಟ ಮಾಡಲು ನಿಷೇಧಿಸಿರುವ ವಸ್ತು / ಪದಾರ್ಥಗಳು |
|---|---|
| ಬೇಯಿಸಿದ ಪದಾರ್ಥಗಳಾದ ಕಾಫಿ, ಟೀ, ಉಪಹಾರ, ಊಟ, ಹಾಲು ಇತ್ಯಾದಿಗಳು,<br><br>ಈ ಮಳಿಗೆಗಳಲ್ಲಿ ಗ್ಯಾಸ್ / | ಪುಸ್ತಕ / ದಿನಪತ್ರಿಕೆ / ನಿಯತಕಾಲಿಕೆಗಳು ಮತ್ತು ಸ್ಟೇಷನರಿ ವಸ್ತುಗಳು, ಮಾರ್ಜಕ / ಸಾಬೂನುಗಳು ಹಣ್ಣು / ಹೂಗಳು, ಜೆರಾಕ್ಸ್, ಪ್ಯಾಕ್ ಆಗಿರುವ ಬಿಸ್ಕೆಟ್ಸ್ / ಜ್ಯೂಸ್, ಬೇಕರಿ ತಿನಿಸುಗಳು, ನೀರಿನ ಬಾಟಲ್, ಮೊಬೈಲ್ ಕರೆನ್ಸಿ, ಸೌಂದರ್ಯವರ್ಧಕಗಳು, ಅಲಂಕಾರಿಕ ವಸ್ತುಗಳು, ಕೊಡುಗೆ |

| | |
|---|---|
| ಸ್ಟೌವ್ ಬಳಕೆಗೆ ಮಾತ್ರ ಇರುತ್ತದೆ. | ನೀಡುವ ವಸ್ತುಗಳು, ಫ್ಯಾನ್ಸಿ ಸ್ಟೋರ್‌ನಲ್ಲಿ ಮಾರಾಟ ಮಾಡುವ ವಸ್ತುಗಳು, ಔಷಧಿಗಳು, ದೂರವಾಣಿ ಬೂತ್, ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಕಾನೂನು ಬಾಹಿರವಾಗಿರುವ ಪಟಾಕಿ, ಗನ್ನುಗಳು, ಸಿಡಿಮದ್ದುಗಳು, ತಂಬಾಕುಯುಕ್ತ ಪದಾರ್ಥಗಳು, ಮದ್ಯದ ಮಾರಾಟ, ಸೀಮೆಎಣ್ಣೆ, ಡೀಸೆಲ್, ಪೆಟ್ರೋಲ್ - ಗ್ಯಾಸ್, ಗ್ಯಾಸ್ ಸಿಲಿಂಡರ್, ಟ್ರಾವೆಲ್ / ಟ್ರಾನ್ಸ್‌ಪೋರ್ಟ್ ಏಜೆನ್ಸಿ, ಟಿಕೇಟ್ ಬುಕಿಂಗ್, ಇತ್ಯಾದಿ ಕಾನೂನು ಮತ್ತು ನಿಗಮದ ವತಿಯಿಂದ ನಿಷೇಧಿಸಲ್ಪಟ್ಟ ಹಾಗೂ ಮುಂದೆ ನಿಷೇಧಿಸಲ್ಪಡುವ ವಸ್ತುಗಳು. ಈ ಮಳಿಗೆಗಳಲ್ಲಿ ಗ್ಯಾಸ್/ಸ್ಟೌವ್ ಬಳಕೆ ಒರತ್ತುಪಡಿಸಿ, ಸೌವದೆ/ಇತರೆ ಬಳಕೆಗೆ ಅವಕಾಶವಿರುವುದಿಲ್ಲ. |

೩೧) ನಿಗದಿತ ದರದಲ್ಲಿ ಮಾರಾಟ (MRP rate):- ವಾಣಿಜ್ಯ ಮಳಿಗೆಗಳಲ್ಲಿ ಪರವಾನಗಿದಾರರು ಮಾರಾಟ ಮಾಡುವ ವಸ್ತುಗಳನ್ನು, ಅವುಗಳ ಮೇಲೆ ನಮೂದಿಸಲಾದ ಗರಿಷ್ಠ ಮೊತ್ತಕ್ಕೆ / MRP (Maximum Retail Price) ಮೀರದಂತೆ ಮಾರಾಟ ಮಾಡಬೇಕು. ವಸ್ತುಗಳನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.500/-, ೨ನೇ ಪ್ರಕರಣಕ್ಕೆ ರೂ.೧,೦೦೦/- ಮತ್ತು ೩ನೇ ಪ್ರಕರಣಕ್ಕೆ ರೂ.೨,೦೦೦/- ದಂಡ ವಿಧಿಸಲಾಗುವು. ಇದು ಪುನರಾವರ್ತನೆಗೊಂಡಲ್ಲಿ, ರೂ.೨,೦೦೦/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

೩೨) ಪರವಾನಗಿದಾರರು ಶೇವಣಿ ಇರಿಸುವ ವಸ್ತುಗಳಿಗೆ ಬೆಂಕಿ ತಗುಲದಂತೆ ಅಗ್ನಿರಕ್ಷಕ ಉಪಕರಣಗಳ ವ್ಯವಸ್ಥೆ ಮಾಡಿಕೊಳ್ಳುವುದು.

೩೩) ಪರವಾನಗಿದಾರರು ನಿಗದಿಪಡಿಸಿದ ದರಗಳನ್ನು ಮಾತ್ರ ಪಡೆದುಕೊಳ್ಳುವುದು. ಒಂದು ವೇಳೆ ನಿಗದಿತ ದರಕ್ಕಿಂತ ಹೆಚ್ಚಿನ ದರಗಳನ್ನು ಪರವಾನಗಿದಾರರು ಪಡೆಯುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.500/-, ೨ ನೇ ಪ್ರಕರಣಕ್ಕೆ ರೂ.೧,೦೦೦/- ಮತ್ತು ೩ ನೇ ಪ್ರಕರಣಕ್ಕೆ ರೂ.೨,೦೦೦/- ದಂಡ ವಿಧಿಸುವುದು. ಇದು ಪುನರಾವರ್ತನೆಗೊಂಡಲ್ಲಿ ರೂ.೨,೦೦೦/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

೩4) ಇತರೆ ಮಳಿಗೆಗಳ ಪರವಾನಗಿದಾರರಿಗೆ ಅನ್ವಯವಾಗುವ ನಿಯಮ / ನಿಬಂಧನೆಗಳು ಈ ಮಳಿಗೆಯ ಪರವಾನಗಿದಾರರಿಗೂ ಅನ್ವಯವಾಗಲಿದೆ.

೩5) ಯಾವುದೇ ಕಾರಣ ನೀಡದೇ, 4 ತಿಂಗಳ ನೋಟಿಸ್ ನೀಡಿ ಮಳಿಗೆಯ ಪರವಾನಗಿಯನ್ನು ರದ್ದುಪಡಿಸಲು ನಿಗಮವು ಅಧಿಕಾರವನ್ನು ಹೊಂದಿರುತ್ತದೆ.

೩6) ಮಾಸಿಕ ಪರವಾನಗಿ ಶುಲ್ಕ, ಸರಕು ಮತ್ತು ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸತತವಾಗಿ ೨ ತಿಂಗಳು ಪಾವತಿಸದೇ ಬಾಕಿ ಉಳಿಸಿಕೊಂಡಲ್ಲಿ, ಅಂತಹ ಮಳಿಗೆಗಳ ಪರವಾನಗಿಯನ್ನು ನಿಗಮದ ವತಿಯಿಂದ ರದ್ದುಪಡಿಸಿ, ಪರವಾನಗಿದಾರರು ನಿಗಮದಲ್ಲಿಟ್ಟಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಳ್ಳುವುದು.

೩7) ಟೆಂಡರ್‌ನಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೇ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡುಬಂದಲ್ಲಿ, ಅಂತಹ ಬಿಡ್‌ದಾರರ ಆಯ್ಕೆ / ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ನಿಗಮದಲ್ಲಿಟ್ಟಿರುವ ಇ.ಎಂ.ಡಿ. / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಅಂತಹ ಬಿಡ್‌ದಾರರನ್ನು / ಪರವಾನಗಿದಾರರನ್ನು ಮುಂದಿನ ೦೨ ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

೩8) ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು, ಮುಂದಿನ ೦೨ ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

೩9) <u>ಹೊಸದಾಗಿ ಆಯ್ಕೆಯಾದ ಪರವಾನಗಿದಾರರು ಕನಿಷ್ಠ ೦೨ ವರ್ಷಗಳ ಕಾಲ ಪರವಾನಗಿಯನ್ನು ನಡೆಸಬೇಕು.</u>

ಮುಂದುವರೆದಂತೆ-5

40) ಪರವಾನಗಿದಾರರು ಒಂದು ವೇಳೆ 02 ವರ್ಷದೊಳಗೆ ಪರವನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಚಿಸಿದಲ್ಲಿ, 06 ತಿಂಗಳ ಮುಂಗಡ ನೋಟೀಸ್ ನೀಡಬೇಕು. ಮುಂಗಡ ನೋಟೀಸ್ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು, ನೋಟೀಸ್ ನೀಡಿದ 06 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಚಿಸಿದಲ್ಲಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಲು ಅವಕಾಶ ನೀಡಲಾಗುವುದು.

41) ಪರವಾನಗಿದಾರರು ಎರಡು ವರ್ಷದೊಳಗೆ ಪರವಾನಗಿ ರದ್ದತಿ ಮಾಡಿಕೊಳ್ಳುವ ಪರವಾನಗಿದಾರರ ಭದ್ರತಾ ಠೇವಣಿ ಮೊತವನ್ನು ಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಕಪ್ಪುಪಟ್ಟಿಗೆ ಸೇರಿಸಲಾಗುವುದು.

42) ಪರವಾನಗಿದಾರರು ಎರಡು ವರ್ಷದ ನಂತರ ಕರರು ರದ್ದತಿ ಮಾಡಿಕೊಳ್ಳಲು ಪರವಾನಗಿದಾರರು ಇಚ್ಚಿಸಿದಲ್ಲಿ, 04 ತಿಂಗಳ ಮುಂಗಡ ನೋಟೀಸ್ ನೀಡುವುದು. ಸದರಿ 04 ತಿಂಗಳು ಮಳಿಗೆಯನ್ನು ನಡೆಸಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಬೇಕಾಗಿರುತ್ತದೆ.

43) ಎರಡು ವರ್ಷದ ಅವಧಿಯೊಳಗೆ ಯಾವುದೇ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಎರಡು ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

44) ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಮಳಿಗೆಯನ್ನು ಉಪ-ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸುವುದು ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಕರಾರು ರದ್ದುಪಡಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

45) ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಟೆಂಡರ್ / ಸಂಧಾನದಲ್ಲಿ ಭಾಗವಹಿಸಿದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು.

46) ಪರವಾನಗಿ ಪಡೆದ ಪರವಾನಗಿದಾರರೇ ಮಳಿಗೆಯನ್ನು ನಡೆಸುವುದು. ಮಳಿಗೆಗಳನ್ನು ಉಪ ಪರವಾನಗಿಗೆ ನೀಡಲು ಅವಕಾಶವಿರುವುದಿಲ್ಲ.

47) ಮುಷ್ಕರ / ಬಂದ್ ಅವಧಿಯಲ್ಲಿ ಮಾಸಿಕ ಪರವಾನಗಿ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶವಿರುವುದಿಲ್ಲ.

48) ಪರವಾನಗಿದಾರರು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜಿ.ಎಸ್.ಟಿ., ಆದಾಯ ತೆರಿಗೆ, ಭವಿಷ್ಯ ನಿಧಿ, ಇ.ಎಸ್.ಐ, ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಪ್ರಮಾಣ ಪತ್ರ, ಟ್ರೇಡ್ ಲೈಸೆನ್ಸ್, ಲೇಬರ್ ಲೈಸೆನ್ಸ್, ಫುಡ್ ಲೈಸೆನ್ಸ್ ಇತ್ಯಾದಿ ಪ್ರಮಾಣಪತ್ರಗಳನ್ನು ಹೊಂದಿರಬೇಕು.

49) ಆಯ್ಕೆಗೊಂಡ ಪರವಾನಗಿದಾರರು, ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (Employees Provident Fund Organisation) ರವರಲ್ಲಿ ನೋಂದಣಿ ಮಾಡಿಸಿಕೊಂಡಿರಬೇಕು. ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಮಾಸಿಕ ಭವಿಷ್ಯ ನಿಧಿ ವಂತಿಕೆಯನ್ನು ಆರ್.ಪಿ.ಎಫ್.ಸಿ. ರವರಿಗೆ ಜಮಾ ಮಾಡಬೇಕು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

50) ಆಯ್ಕೆಗೊಂಡ ಪರವಾನಗಿದಾರರು, ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿ.ಎಫ್ / ಇಎಸ್‌ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

51) ಸ್ಥಳೀಯ ಇಲಾಖೆ / ಪ್ರಾಧಿಕಾರಗಳು ವಿಧಿಸುವ ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಗೆ ಸಂದಾಯ ಮಾಡಬೇಕು.

52) ನಿಗಮದ ವ್ಯವಹಾರಕ್ಕೆ ವ್ಯತಿರಿಕ್ತ ಪರಿಣಾಮ ಉಂಟುಮಾಡುವ ವ್ಯವಹಾರವನ್ನು, ನಿಗಮದ ವತಿಯಿಂದ ನಿಷೇದಿಸಲ್ಪಟ್ಟ, ಮುಂದೆ ನಿಷೇಧಿಸಲ್ಪಡುವ ವಸ್ತುಗಳು ಮತ್ತು ಕಾನೂನುಬಾಹಿರ ವಸ್ತುಗಳ ಮಾರಾಟವನ್ನು ಮಳಿಗೆಗಳಲ್ಲಿ ನಿಷೇಧಿಸಲಾಗಿದೆ. ಈ ರೀತಿಯ ವಸ್ತುಗಳ ಮಾರಾಟ ಕಂಡುಬಂದಲ್ಲಿ, ಪರವಾನಗಿಯನ್ನು ರದ್ದುಪಡಿಸಲಾಗುವುದು.

53) ಆಯ್ಕೆಗೊಂಡ ಪರವಾನಗಿದಾರರು ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ಅಗ್ನಿ ರಕ್ಷಕ / ಶಾಮಕ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸುವುದು. ಅಗ್ನಿ ಅವಘಡ ಹಾಗೂ ಇತರೆ ನೈಸರ್ಗಿಕ ದುರಂತಗಳಿಗೆ ನಿಗಮವು ಜವಾಬ್ದಾರಿಯಾಗಿರುವುದಿಲ್ಲ.

54) ಲಾಡ್ಜಿಂಗ್ ಮತ್ತು ಡಾರ್ಮಿಟರಿ, ಉಪಹಾರ ಗೃಹ, ಬೇಕರಿ ಮಳಿಗೆಗಳು, ಚಾಟ್ಸ್ ಸೆಂಟರ್ ಇವುಗಳನ್ನು ಹೊರತುಪಡಿಸಿ, ಇತರೆ ಮಳಿಗೆಗಳಲ್ಲಿ ಎಲ್ಲಾ ಮಾದರಿಯ ಸ್ಟೌವ್ / ಗ್ಯಾಸ್ ಬಳಕೆಯನ್ನು ನಿಷೇಧಿಸಲಾಗಿದೆ.

55) ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.

ಮುಂದುವರೆದಂತೆ-6



56) ಯಾವುದೇ ಕಾರಣ ನೀಡದೇ ಟೆಂಡರನ್ನು ಪುರಸ್ಕರಿಸುವ / ತಿರಸ್ಕರಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

57) ಆಯ್ಕೆಗೊಂಡ ಪರವಾನಗಿದಾರರು ನಿಗಮದ ನಿಯಮಾವಳಿಯ ಪ್ರಕಾರ ಸೂಚಿಸಿರುವ ಪರವಾನಗಿ ಶುಲ್ಕದ 8ರಷ್ಟು ಹಣವನ್ನು ಭದ್ರತಾ ಠೇವಣಿ ಹಣ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು 15 ದಿನಗಳೊಳಗೆ ವಿಭಾಗೀಯ ಕಛೇರಿಯಲ್ಲಿ ಸಂದಾಯ ಮಾಡಿ ನಿಗಮದೊಂದಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಬದ್ಧರಾಗಿರಬೇಕು. ನಿಗದಿತ ಅವಧಿಯಲ್ಲಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ ತಾತ್ಕಾಲಿಕ ಪರವಾನಗಿ ಆಯ್ಕೆಯನ್ನು ರದ್ದುಪಡಿಸಿ ತಾವು ಸಲ್ಲಿಸಿರುವ ಇಎಂಡಿ., ಹಣವನ್ನು ಸಂಸ್ಥೆಗೆ ಮುಟ್ಟುಗೋಲು ಮಾಡಿಕೊಳ್ಳಲಾಗುವುದು.

58) ಆಯ್ಕೆಗೊಂಡ ಪರವಾನಗಿದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಶೇ.18.00%ರಷ್ಟು ಸೇವಾ ತೆರಿಗೆಯನ್ನು (ಜಿಎಸ್‌ಟಿ ಶುಲ್ಕ) ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು.

59) ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಬಂಧನೆಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.

60) ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

61) ಮಳಿಗೆಯ ನೀರಿನ/ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಗಿ ಶುಲ್ಕದೊಂದಿಗೆ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.

62) ನಿಗಮದಿಂದ ಕರೆಯಲಾಗುವ ಯಾವುದೇ ಟೆಂಡರ್ / ಸಂಧಾನವನ್ನು ಯಾವುದೇ ಸಮಯದಲ್ಲಿ ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

63) ಆಯ್ಕೆಗೊಂಡ ಪರವಾನಿಗೆದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ., ಹಣವನ್ನು ಹಿಂತಿರುಗಿಸಲಾಗುವುದು.

64) ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕವನ್ನು (ಸೇವಾ ತೆರಿಗೆ ಶುಲ್ಕ/ಇತರೆ ಶುಲ್ಕವನ್ನು ಒಳಗೊಂಡಂತೆ) ಆ ತಿಂಗಳ 07ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು. ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.

65) ಶಾಶ್ವತ ವಾಣಿಜ್ಯ ಮಳಿಗೆಗಳನ್ನು ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ನೀಡಲಾಗುವುದು.

66) ಆಯ್ಕೆಗೊಂಡ ಪರವಾನಗಿದಾರರು ಅವರ ಸಿಬ್ಬಂದಿಗಳ ಪಿಎಫ್ ಮೊತ್ತವನ್ನು ನಿಯಮಾವಳಿಗಳನ್ವಯ ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆಯಲ್ಲಿ ಪಾವತಿಸಿ ದಾಖಲೆಗಳನ್ನು ಪಡೆಯುತ್ತಿರುವ ಬಗ್ಗೆ ಕೆಎಸ್‌ಆರ್‌ಟಿಸಿ., ಅಧಿಕಾರಿಗಳು ಪರಿಶೀಲನೆಗೆ ಕೇಳಿದಾಗ ಪ್ರಸ್ತುತಪಡಿಸಬೇಕಾಗಿರುತ್ತದೆ.

67) ಇ-ಟೆಂಡರ್‌ನಲ್ಲಿ ಭಾಗವಹಿಸುವ ಅರ್ಜಿದಾರರು ತಮ್ಮ ಫೋಟೋ ಮತ್ತು ವಿಳಾಸದ ಮೂಲ ಪ್ರತಿಯನ್ನು ನಿಗಧಿತ ಅವಧಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಅಪ್‌ಲೋಡ್ ಮಾಡಬೇಕು. (ಆಧಾರ ಕಾರ್ಡ್, ರೇಷನ್ ಕಾರ್ಡ್, ಚುನಾವಣಿ ಗುರುತ್ತಿನ ಕಾರ್ಡ್ ಇವುಗಳಲ್ಲಿ ಯಾವುದಾದರೂ ಒಂದರ ಮೂಲ ಪ್ರತಿ).

68) ಇ.ಎಸ್.ಐ ಕಾಯ್ದೆಯ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಗಳ/ಸ್ಥಳಗಳ ಪರವಾನಗಿದಾರರುಗಳು ಇ.ಎಸ್.ಐ ಕೋಡ್‌ನ್ನು ಹೊಂದಿರಬೇಕು ಮತ್ತು ಅವರುಗಳ ವ್ಯಾಪ್ತಿಯಲ್ಲಿ ಬರುವ ನೌಕರರನ್ನು ಇ.ಎಸ್.ಐ, ವ್ಯಾಪ್ತಿಯಲ್ಲಿ ತರಬೇಕು ಹಾಗೂ ಕಾರ್ಡ್‌ನ್ನು ಕೊಡಿಸಬೇಕು. ನಿಗದಿತ ವಂತಿಗೆಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು ಮತ್ತು ಇ.ಎಸ್.ಐ ಸೌಲಭ್ಯಗಳನ್ನು ನೌಕರರಿಗೆ ಹಾಗೂ ಅವರ ಅವಲಂಭಿತರಿಗೆ ಸಿಗುವಂತೆ ಸಹಾಯ ಮಾಡಬೇಕು.

69) ಪರವಾನಗಿದಾರರು ಎಲ್ಲಾ ಕಾರ್ಮಿಕ ಕಾಯಿದೆಗಳನ್ನು ಪಾಲಿಸತಕ್ಕದ್ದು.

೭೦) ಡಿ.ಡಿ.ಯನ್ನು "ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ರಾಮನಗರ ವಿಭಾಗ" ಇವರ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ನಿಂದ ಪಡೆದು ಸಲ್ಲಿಸುವುದು.

೭೧) ನಿಗಮದ ಸುತ್ತೋಲೆ ಸಂಖ್ಯೆ:1425/2018ರ ಅನ್ವಯ ಕ.ರಾ.ರ.ಸಾ.ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳಲ್ಲಿ ನಿಗದಿತ ವಸ್ತುಗಳನ್ನು ಮಾರಾಟ ಮಾಡುವ ಬಗ್ಗೆ ಸಾ.ಸ್ಥಾ.ಆ.ಸಂಖ್ಯೆ:787/2017, XVII ರ ಕ್ರಮ ಸಂಖ್ಯೆ:04ರ "ವಾಣಿಜ್ಯ ಮಳಿಗೆಗಳಲ್ಲಿ ಪರವಾನಗಿದಾರರು ನಿಗದಿತ ವಸ್ತುಗಳನ್ನು ಹೊರತುಪಡಿಸಿ, ಇತರೆ ವಸ್ತುಗಳನ್ನು ಮಾರಾಟ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲನೇ ಬಾರಿ ರೂ.1,000/- ದಂಡ, 2ನೇ ಬಾರಿ ರೂ.2,000/- ದಂಡ ಮತ್ತು 3ನೇ ಬಾರಿ ಅಥವಾ ತದನಂತರ ರೂ.5,000/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

೭೨) ನಿಗಮದ ಸುತ್ತೋಲೆ ಸಂಖ್ಯೆ:1515/2019ರ ಅನ್ವಯ ಕ.ರಾ.ರ.ಸಾ.ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆ/ಜಾಹೀರಾತು ಪರವಾನಗಿದಾರರು ಕರಾರು ಒಪ್ಪಂದ ಮುಕ್ತಾಯದ ನಂರ ಮಳಿಗೆ/ಸ್ಟ್ರಕ್ಚರ್‌ಗಳನ್ನು ತೆರವುಗೊಳಿಸಲು ತಡಮಾಡಿದ ಪ್ರಕರಣಗಳಲ್ಲಿ ಈ ಕೆಳಕಂಡಂತೆ ಕ್ರಮವನ್ನು ತೆಗೆದುಕೊಳ್ಳಲಾಗುವುದು.

(ಎ)

| ಕ್ರ.ಸಂ. | ವಿಳಂಬದ ದಿನಗಳು | ವಿಧಿಸುವ ದಂಡದ ಮೊತ್ತ ಶೇ.ವಾರು |
|---|---|---|
| 1 | ಮಳಿಗೆಯನ್ನು ತೆರವುಗೊಳಿಸಲು 07 ದಿನಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪರವಾನಗಿ ಶುಲ್ಕದ ಶೇ.25 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸಲಾಗುವುದು. |
| 2 | ಮಳಿಗೆಯನ್ನು ತೆರವುಗೊಳಿಸಲು 07 ದಿನಗಳ ಮೇಲ್ಪಟ್ಟು, 15 ದಿನಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಳ ಪರವಾನಗಿ ಶುಲ್ಕದ ಶೇ.50 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸಲಾಗುವುದು. |
| 3 | ಮಳಿಗೆಯನ್ನು ತೆರವುಗೊಳಿಸಲು 15 ದಿನಗಳ ಮೇಲ್ಪಟ್ಟು, ಒಂದು ತಿಂಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪೂರ್ಣ ಪರವಾನಗಿ ಶುಲ್ಕದಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸಲಾಗುವುದು. (ಕೊನೆಯ ತಿಂಗಳ ಪರವಾನಗಿ ಶುಲ್ಕವೆಂದರೆ, ಪೂರ್ತಿ ತಿಂಗಳಿಗೆ ಅನ್ವಯವಾಗುವ ಪರವಾನಗಿ ಶುಲ್ಕ) |

ಮುಂದುವರೆದಂತೆ-7



(ಬಿ) ಪರವಾನಗಿದಾರರು ಒಂದು ತಿಂಗಳೊಳಗಾಗಿ ಮಳಿಗೆಯಲ್ಲಿನ ವಸ್ತುಗಳನ್ನು ಹಾಗೂ ತೆರೆದ ಸ್ಥಳಗಳಲ್ಲಿ ಸ್ಟ್ರಕ್ಚರನ್ನು ತೆರವುಗೊಳಿಸಲು ವಿಫಲರಾದಲ್ಲಿ, ಅವುಗಳನ್ನು ಮುಟ್ಟುಗೋಲು ಹಾಕಿಕೊಂಡು ಪರವಾನಗಿದಾರರ ಖರ್ಚಿನಲ್ಲಿ ತೆರವುಗೊಳಿಸಲು/ವಿಲೇವಾರಿ ಮಾಡಲು ನಿಗಮದ ವತಿಯಿಂದ ಕ್ರಮ ಕೈಗೊಳ್ಳಲಾಗುವುದು.

(ಸಿ) ಮಳಿಗೆಯಲ್ಲಿನ ವಸ್ತುಗಳನ್ನು ಮತ್ತು ತೆರೆದ ಸ್ಥಳಗಳ ಮಳಿಗೆಗಳ ಸ್ಟ್ರಕ್ಚರಗಳನ್ನು ತೆರವುಗೊಳಿಸಿರುವುದನ್ನು ಖಚಿತಪಡಿಸಿಕೊಂಡು, ಪರವಾನಗಿದಾರರಿಂದ ಬರಬೇಕಾಗಿರುವ ಬಾಕಿ ಮೊತ್ತವನ್ನು ಹೊಂದಾಣಿಕೆ ಮಾಡಿದ ನಂತರ, ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲು ಕ್ರಮ ಕೈಗೊಳ್ಳಲಾಗುವುದು.

೭೩) ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು. ವಾಣಿಜ್ಯ ಮಳಿಗೆಗಳಿಗೆ ಆಯ್ಕೆಯಾದ ಪರವಾನಗಿದಾರರು ಕರ್ನಾಟಕ ಸ್ಟಾಂಪ್ ಆಕ್ಟ್-2010 ರನ್ವಯ ಒಂದು ವರ್ಷ ಮೀರುವ ಮತ್ತು 10 ವರ್ಷ ಮೀರದೆ ಇರುವ ಪರವಾನಗಿ ಅವಧಿಗೆ, ಒಟ್ಟು ಪರವಾನಗಿ ಶುಲ್ಕದ (ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳ ಸೇರಿದಂತೆ) ಸರಾಸರಿ ಮೊತ್ತದ ಮೇಲೆ ಶೇ.1ರಷ್ಟು ಹಾಗೂ ಭದ್ರತಾ ಠೇವಣಿ ಮೊತ್ತದ ಮೇಲೆ ಶೇ.1ರಷ್ಟು ಸ್ಟಾಂಪ್ ಶುಲ್ಕವನ್ನು ಭರಿಸಬೇಕಾಗುತ್ತದೆ.

೭೪) ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ 15 ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೭೫) ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಶುಲ್ಕವನ್ನು, ಪ್ರಸ್ತುತ ಶೇ.18, ದ್ವಿ-ಚಕ್ರ ವಾಹನ ನಿಲ್ದಾಣಕ್ಕೆ ಪರವಾನಗಿ ಶುಲ್ಕದ ಮೇಲೆ ಶೇ.2.224%ರಷ್ಟು ಟಿಡಿಎಸ್/ಟಿಸಿಎಸ್ ಪಾವತಿಸಬೇಕಿರುತ್ತದೆ. ಸದರಿ ಶುಲ್ಕಗಳನ್ನು ಮುಂಗಡವಾಗಿ ನಿಗಮಕ್ಕೆ ಪಾವತಿಸಬೇಕು. ಕಾಲ ಕಾಲಕ್ಕೆ ಸರ್ಕಾರ ವಿಧಿಸುವ ಷರುತ್ತುಗಳಿಗೆ ಬದ್ಧರಿರುವುದು. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇ.18 ರಷ್ಟು ಬಡ್ಡಿಯನ್ನು ಕನಿಷ್ಠ ರೂ.100/- ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ವಿಧಿಸಲಾಗುವುದು.

೭೬) ಪರವಾನಗಿದಾರರು ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.

77) ಪರವಾನಗಿದಾರರು ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಆ ವಾಣಿಜ್ಯ ಮಳಿಗೆಗೆ ಹೊಂದಿಕೊಂಡಂತೆ ಇರುವ ಹೆಚ್ಚುವರಿ ಸ್ಥಳವನ್ನು ಬಳಸಲು ಉದ್ದೇಶಿಸಿ, ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ನೀಡಿದಲ್ಲಿ, ಸಣ್ಣ ವಿಸ್ತೀರ್ಣದ ಮಳಿಗೆಗಳಿಗೆ, ಅಂದರೆ 200 ಚದರಡಿ ವಿಸ್ತೀರ್ಣದ ಒಳಗಿನ ಮಳಿಗೆಗಳನ್ನೂ ಒಳಗೊಂಡಂತೆ ಸ್ಥಳಾವಕಾಶ ಲಭ್ಯತೆಗೆ ಅನುಗುಣವಾಗಿ ಟೆಂಡರ್/ಕರಾರು ಒಪ್ಪಂದದಲ್ಲಿ ನಮೂದಿಸಿದ ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.20 ರಷ್ಟು ವಿಸ್ತೀರ್ಣದ ಸ್ಥಳವನ್ನು, ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚ.ಅಡಿ ಪರವಾನಗಿ ಶುಲ್ಕದ 1.5 ಪಟ್ಟು ಮೊತ್ತವನ್ನು ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸಿ ಒದಗಿಸುವುದು. ಹೆಚ್ಚುವರಿ ಸ್ಥಳಾವಕಾಶ ಬಳಸಿಕೊಂಡು ಪ್ರತ್ಯೇಕ ಮಳಿಗೆ, ಕೌಂಟರ್, ವ್ಯವಹಾರ ಮಾಡಲು ಅವಕಾಶವಿರುವುದಿಲ್ಲ.

78) ವಾಣಿಜ್ಯ ಮಳಿಗೆ/ಉಪಹಾರ ಗೃಹ/ಲಾಡ್ಜ್ ಮತ್ತು ಇತರೆ ಎಲ್ಲಾ ಮಳಿಗೆಗಳಲ್ಲಿ ಪರವಾನಗಿದಾರರು ನಿಗಧಿತ ವಸ್ತುಗಳನ್ನು ಹೊರತುಪಡಿಸಿ, ಇತರೆ ವಸ್ತುಗಳನ್ನು ಮಾರಾಟ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.1,000/-, 2ನೇ ಪ್ರಕರಣಕ್ಕೆ ರೂ.2,000/- ಮತ್ತು 3ನೇ ಪ್ರಕರಣಕ್ಕೆ ಅಥವಾ ತದನಂತರ ರೂ.5,000/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

79) **<u>ದ್ವಿಚಕ್ರ / ಕಾರ್ ವಾಹನ ನಿಲುಗಡೆ ಶುಲ್ಕ:</u>**

ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ದ್ವಿಚಕ್ರ ವಾಹನ ನಿಲ್ದಾಣ ಹಾಗೂ ಕಾರು ನಿಲ್ದಾಣದ ವ್ಯವಸ್ಥೆ ಕಲ್ಪಿಸಲಾಗಿದ್ದು, ಪರವಾನಗಿದಾರರು ಈ ಕೆಳಕಂಡಂತೆ ನಿಲುಗಡೆ ಶುಲ್ಕ ವಿಧಿಸಬೇಕಿರುತ್ತದೆ.

**<u>ತಾಲ್ಲೂಕು / ಇತರೆ ಬಸ್ ನಿಲ್ದಾಣಗಳ ಪಾರ್ಕಿಂಗ್ ದರಗಳು:</u>**

| ಸಮಯ (ಗಂಟೆಗಳಲ್ಲಿ) | 0-2 | 2-4 | 4-8 | 8-12 | 12-24 | 24 ಗಂಟೆಗಳ ಮೇಲ್ಪಟ್ಟು |
|---|---|---|---|---|---|---|
| ವಾಹನಗಳ ಮಾದರಿ | | ದರ (ರೂ.ಗಳಲ್ಲಿ) | | | | |
| ದ್ವಿಚಕ್ರ ವಾಹನಗಳು | ರೂ. 5/- | ರೂ.5/- | ರೂ. 10/- | 15/- | 20/- | ಪ್ರತಿ ದಿನಕ್ಕೆ ರೂ.20/- |
| ಕಾರು | ರೂ. 10/- | ರೂ.10/- | ರೂ. 20/- | 30/- | 40/- | ಪ್ರತಿ ದಿನಕ್ಕೆ ರೂ.40/- |

75) ಒಬ್ಬ ಗ್ರಾಹಕರು ಮೂರು (03) ದಿನಗಳ ಮೇಲ್ಪಟ್ಟು ನಿರಂತರವಾಗಿ ವಾಹನವನ್ನು ಪಾರ್ಕಿಂಗ್ ಮಾಡಲು ಅವಕಾಶವಿರುವುದಿಲ್ಲ.

76) ಸೈಕಲ್ / ಸ್ಕೂಟರ್ ನಿಲ್ದಾಣ (ದ್ವಿಚಕ್ರ ವಾಹನ ನಿಲ್ದಾಣ) ಮತ್ತು ಕಾರು ನಿಲ್ದಾಣದಲ್ಲಿ ವಾಹನಗಳ ನಿಲುಗಡೆಗೆ ನಿಗದಿಪಡಿಸಿದ ದರಗಳನ್ನು ಮಾತ್ರ ಪಡೆದುಕೊಳ್ಳುವುದು. ಒಂದು ವೇಳೆ ನಿಗದಿತ ದರಕ್ಕಿಂತ ಹೆಚ್ಚಿನ ದರಗಳನ್ನು ಎರಡನೇ ಪಾರ್ಟಿಯು ಪಡೆಯುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ ಮೊದಲ ಐದು ಪ್ರಕರಣಗಳಿಗೆ ತಲಾ ರೂ.500/-ಗಳನ್ನು, ನಂತರದ ಐದು ಪ್ರಕರಣಗಳಿಗೆ ತಲಾ ರೂ.1000/-ಗಳನ್ನು ದಂಡ ವಿಧಿಸಲಾಗುವುದು (ಪ್ರತ್ಯೇಕವಾಗಿ ಜಿಎಸ್‌ಟಿ ಅನ್ವಯವಾಗುತ್ತದೆ). ತದನಂತರದ ಪ್ರಕರಣಗಳು ದಾಖಲಾದಲ್ಲಿ ಕರಾರನ್ನು ರದ್ದುಪಡಿಸಲಾಗುವುದು ಹಾಗೂ ಕಪ್ಪುಪಟ್ಟಿಗೆ ಸೇರಿಸಲಾಗುವುದು.

77) ನಿಗಮದ ಸುತ್ತೋಲೆ ಸಂಖ್ಯೆ:1513/2019ರ ಅನ್ವಯ ಬೆಂಗಳೂರು ಹಾಗೂ ಇತರೆ ಜಿಲ್ಲಾ ಕೇಂದ್ರ ಬಸ್ ನಿಲ್ದಾಣಗಳಲ್ಲಿ ವಾಹನಗಳು ಒಳಬರುವ ಮತ್ತು ಹೊರಹೋಗುವ ಸಮಯವನ್ನು ದಾಖಲಿಸುವ ಪಾರ್ಕಿಂಗ್ ಮೀಟರ್‌ನ್ನು ಪರವಾನಗಿದಾರರು ಕಡ್ಡಾಯವಾಗಿ ಬಳಸುವುದು.

ಮುಂದುವರೆದಂತೆ-8



78) ಬಸ್ ನಿಲ್ದಾಣಗಳಲ್ಲಿ ದ್ವಿಚಕ್ರ ವಾಹನ ನಿಲ್ದಾಣಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಟೆಂಡರ್ ಕರೆಯುವಾಗ, ಅಂಗವಿಕಲರ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಿಗೆ ನಿಲ್ದಾಣದಲ್ಲಿ ಪಾರ್ಕಿಂಗ್ ಮಾಡಲು ಲಭ್ಯವಿರುವ ಸ್ಥಳದಲ್ಲಿ ಕನಿಷ್ಠ ಎರಡು ದ್ವಿಚಕ್ರ / ತ್ರಿಚಕ್ರ / ಕಾರನ್ನು ಅಥವಾ ಲಭ್ಯವಿರುವ ಪಾರ್ಕಿಂಗ್ ಸ್ಥಳದಲ್ಲಿ ಶೇ.2 ರಷ್ಟನ್ನು ಅಂಗವಿಕಲರ ವಾಹನಗಳನ್ನು ಉಚಿತವಾಗಿ ನಿಲ್ಲಿಸಲು ಕಾಯ್ದಿರಿಸುವ ನಿಬಂಧನೆಯನ್ನು ನಿಯಮಾವಳಿಗಳಲ್ಲಿ ಸೇರಿಸಿ, ಟೆಂಡರ್ ಕರೆಯಲು ಕ್ರಮ ಕೈಗೊಳ್ಳುವುದು.

79) ಇನ್ನಿತರ ವಾಣಿಜ್ಯ ಮಳಿಗೆಗಳಿಗೆ ಅನ್ವಯಿಸುವ ನಿಯಮ / ನಿಬಂಧನೆಗಳು ಈ ಸೈಕಲ್/ಸ್ಕೂಟರ್ ನಿಲ್ದಾಣದ ಪರವಾನಗಿದಾರರಿಗೂ ಅನ್ವಯವಾಗುತ್ತವೆ.

80) ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಉಪ-ಪರವಾನಗಿ ನೀಡಿರುವುದು ಕಂಡು ಬಂದಲ್ಲಿ / ಸಾಬೀತಾದಲ್ಲಿ, ತಕ್ಷಣದಿಂದ ಜಾರಿಗೆ ಬರುವಂತೆ ಪರವಾನಗಿಯನ್ನು ರದ್ದುಪಡಿಸಿ, ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

81) ಟೆಂಡರ್ ಅಥವಾ ಮ್ಯಾನ್ಯುಯಲ್ ಟೆಂಡರ್‌ನಲ್ಲಿ ಆಯ್ಕೆಯಾಗದ ಬಿಡ್‌ದಾರರುಗಳ (H1,H2 & H3 ಹೊರತುಪಡಿಸಿ) ಇ.ಎಂ.ಡಿ. ಮೊತ್ತವನ್ನು ಟೆಂಡರ್ ಅಂತಿಮಗೊಂಡ ನಂತರ ಹಿಂದಿರುಗಿಸುವುದು. H2 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ಹೆಚ್1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ

ಹಿಂದಿರುಗಿಸಲಾಗುವುದು. H3 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು H1 or H2 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು.

೮೨) ಟೆಂಡರ್‌ನಲ್ಲಿ ಅತಿ ಹೆಚ್ಚು ಮೊತ್ತವನ್ನು ಬಿಡ್‌ಮಾಡಿ ಪರವಾನಗಿದಾರರಾಗಿ ಆಯ್ಕೆಯಾದ ಬಿಡ್‌ದಾರರು ನಿಗದಿತ ದಿನಾಂಕದೊಳಗಾಗಿ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಲು ಹಾಗೂ ಕರಾರು ಮಾಡಿಕೊಳ್ಳಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೮೩) ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಮತ್ತು ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ ಹಾಗೂ ನಿಗದಿತ ದಿನಾಂಕದಲ್ಲಿ ವ್ಯವಹಾರ ಪ್ರಾರಂಬಿಸದೆ ಇದ್ದಲ್ಲಿ ಅಂತಹ ಬಿಡ್‌ದಾರರ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೮೪) H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡಿದಾಗ, ಅವರು ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೮೫) ಟೆಂಡರ್‌ನಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೇ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡುಬಂದಲ್ಲಿ, ಅಂತಹ ಬಿಡ್‌ದಾರರ ಆಯ್ಕೆ / ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ನಿಗಮದಲ್ಲಿಟ್ಟಿರುವ ಇ.ಎಂ.ಡಿ. / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಅಂತಹ ಬಿಡ್‌ದಾರರನ್ನು / ಪರವಾನಗಿದಾರರನ್ನು ಮುಂದಿನ ೦೨ ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

೮೬) ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು, ಮುಂದಿನ ೦೨ ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

೮೭) ಆಯ್ಕೆಯಾದ ಪರವಾನಗಿದಾರರು ಕನಿಷ್ಠ ೦೨ ವರ್ಷಗಳ ಕಾಲ ಪರವಾನಗಿಯನ್ನು ನಡೆಸಬೇಕು.

೮೮) ಪರವಾನಗಿದಾರರು ಒಂದು ವೇಳೆ ೦೨ ವರ್ಷದೊಳಗೆ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, 06 ತಿಂಗಳ ಮುಂಗಡ ನೋಟಿಸ್/ಮನವಿ ನೀಡಬೇಕು. ಮುಂಗಡ ನೋಟಿಸ್/ಮನವಿ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು. ನೋಟಿಸ್/ಮನವಿ ನೀಡಿದ 06 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಛಿಸಿದಲ್ಲಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಿಕೊಂಡು ನಡೆಸುವುದು.

೮೯) ಎರಡು ವರ್ಷದ ಅವಧಿಯೊಳಗೆ ಯಾವುದೇ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಎರಡು ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ ೦೨ ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

೯೦) ಪರವಾನಗಿದಾರರು ಒಂದು ವೇಳೆ 02 ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, 04 ತಿಂಗಳ ಮುಂಗಡ ನೋಟಿಸ್/ಮನವಿ ನೀಡಬೇಕು. ಮುಂಗಡ ನೋಟಿಸ್/ಮನವಿ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು. ನೋಟಿಸ್/ಮನವಿ ನೀಡಿದ 04 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಛಿಸಿದಲ್ಲಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಿಕೊಂಡು ನಡೆಸುವುದು.

೯೧) ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಮಳಿಗೆಯನ್ನು ಉಪ-ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸುವುದು ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಕರಾರು ರದ್ದುಪಡಿಸಿದ ದಿನಾಂಕದಿಂದ ಮುಂದಿನ ೦೨ ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

೯೨) ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಟೆಂಡರ್ / ಸಂಧಾನದಲ್ಲಿ ಭಾಗವಹಿಸಿದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೯೩) ಆಯ್ಕೆಗೊಂಡ ಪರವಾನಗಿದಾರರು, ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿ.ಎಫ್ / ಇಎಸ್‌ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

೯೪) ಆಯ್ಕೆಗೊಂಡ ಪರವಾನಗಿದಾರರು, ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಕನಿಷ್ಟ ವೇತನ, ಪಿ.ಎಫ್, ಇಎಸ್‌ಐ ಸೌಲಭ್ಯ ನೀಡುವುದು ಮತ್ತು ಪಾವತಿಸಿರುವ ಚಲನ್‌ಗಳನ್ನು ನಿಗಮಕ್ಕೆ ಕಾಲಕಾಲಕ್ಕೆ ಸಲ್ಲಿಸುವುದು.

೯೫) ತೆರೆದ ಸ್ಥಳದ ಮಳಿಗೆಗಳ ಪರವಾನಗಿ ಅವಧಿಯು ೩ ವರ್ಷ ಮತ್ತು ಕಟ್ಟಿದ ಮಳಿಗೆಗಳ ಪರವಾನಗಿ ಅವಧಿಯು ೫ ವರ್ಷಗಳಾಗಿರುತ್ತದೆ.

೯೬) ಬಾಲಕಾರ್ಮಿಕರನ್ನು ನೇಮಿಸಲು ಅವಕಾಶವಿರುವುದಿಲ್ಲ ಮತ್ತು ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು ನಿಯಮಾವಳಿಗಳಿಗೆ ಬದ್ಧರಾಗಿರಬೇಕು.

೯೭) ಸ್ಥಳೀಯ ಇಲಾಖೆ / ಪ್ರಾಧಿಕಾರಗಳು ವಿಧಿಸುವ ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಗೆ ಸಂದಾಯ ಮಾಡಬೇಕು. ಸಂಬಂಧಪಟ್ಟ ತೆರಿಗೆ ಇಲಾಖೆಯಿಂದ ಚಾಲ್ತಿಯಿರುವ ಪ್ರಮಾಣ ಪತ್ರವನ್ನು ಹೊಂದಿರುವುದು ಹಾಗೂ ಕಾಲ ಕಾಲಕ್ಕೆ ನವೀಕರಿಸಿಕೊಳ್ಳುವುದು.

೯೮) ನಿಗಮದ ವ್ಯವಹಾರಕ್ಕೆ ವ್ಯತಿರಿಕ್ತ ಪರಿಣಾಮ ಉಂಟುಮಾಡುವ ವ್ಯವಹಾರವನ್ನು, ನಿಗಮದ ವತಿಯಿಂದ ನಿಷೇದಿಸಲ್ಪಟ್ಟ, ಮುಂದೆ ನಿಷೇಧಿಸಲ್ಪಡುವ ವಸ್ತುಗಳು ಮತ್ತು ಕಾನೂನುಬಾಹಿರ ವಸ್ತುಗಳ ಮಾರಾಟವನ್ನು ಮಳಿಗೆಗಳಲ್ಲಿ ನಿಷೇಧಿಸಲಾಗಿದೆ. ಈ ರೀತಿಯ ವಸ್ತುಗಳ ಮಾರಾಟ ಕಂಡುಬಂದಲ್ಲಿ, ಪರವಾನಗಿಯನ್ನು ರದ್ದುಪಡಿಸುವುದು ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುವುದು.

೯೯) ಆಯ್ಕೆಗೊಂಡ ಪರವಾನಗಿದಾರರು ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ಅಗ್ನಿ ರಕ್ಷಕ / ಶಾಮಕ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸುವುದು. ಅಗ್ನಿ ಅವಘಡ ಹಾಗೂ ಇತರೆ ನೈಸರ್ಗಿಕ ದುರಂತಗಳಿಗೆ ನಿಗಮವು ಜವಾಬ್ದಾರಿಯಾಗಿರುವುದಿಲ್ಲ.

100) ಲಾಡ್ಜಿಂಗ್ - ಡಾರ್ಮಿಟರಿ, ಉಪಹಾರ ಗೃಹ, ಬೇಕರಿ ಮಳಿಗೆಗಳು, ಚಾಟ್ಸ್ ಸೆಂಟರ್ ಇವುಗಳನ್ನು ಹೊರತುಪಡಿಸಿ, ಇತರೆ ಮಳಿಗೆಗಳಲ್ಲಿ ಎಲ್ಲಾ ಮಾದರಿಯ ಸ್ಟೌವ್ / ಗ್ಯಾಸ್ ಬಳಕೆಯನ್ನು ನಿಷೇಧಿಸಲಾಗಿದೆ.

101) ಉಪಹಾರ ಗೃಹಗಳಲ್ಲಿ ಅಡಿಗೆ ಅನಿಲ ಮತ್ತು ವಿದ್ಯುತ್ ಮಾತ್ರ ಉಪಯೋಗಿಸುವುದು. ಉಪಹಾರಗೃಹದಲ್ಲಿ ಕಡ್ಡಾಯವಾಗಿ ಅಗ್ನಿ ರಕ್ಷಕ ಉಪಕರಣ ಅಳವಡಿಸುವುದು.

102) ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.

103) ತೆರೆದ ಸ್ಥಳ/ಶಾಶ್ವತ ಮಳಿಗೆಗಳನ್ನು ಯಾವ ಸ್ಥಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ, ಯಾವಸ್ಥಳದಲ್ಲಿದೆಯೋ ಅದೇ ಸ್ಥಳದಲ್ಲೇ ನೀಡಲಾಗುವುದು ಮತ್ತು ಟೆಂಡರ್‌ನಲ್ಲಿ ನೀಡಿರುವ/ನಮೂದಿಸಿರುವ ಸ್ಥಳದಲ್ಲಿ ಮಾತ್ರ ವ್ಯವಹಾರ ನಡೆಸತಕ್ಕದ್ದು.

104) ಆಯ್ಕೆಯಾದ ಪರವಾನಗಿದಾರರು ಮಳಿಗೆಯಲ್ಲಿ ಆಹಾರ ಪದಾರ್ಥಗಳ ದರಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಅಳವಡಿಸುವುದು.

105) ಆಯ್ಕೆಗೊಂಡ ಪರವಾನಗಿದಾರರು ಅವರ ಸಿಬ್ಬಂದಿಗಳಿಗೆ ಮೂಲವೇತನ ಕಾಯ್ದೆಯಡಿ, ಕನಿಷ್ಟ ಮೂಲವೇತನ ನೀಡುವುದು ಹಾಗೂ ಇಎಸ್‌ಐ ಮತ್ತು ಪಿಎಫ್ ಮೊತ್ತವನ್ನು ನಿಯಮಾವಳಿಗಳನ್ವಯ ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆಯಲ್ಲಿ ಆನ್‌ಲೈನ್ ಮುಖಾಂತರ ಪಾವತಿಸುವುದು ಹಾಗೂ ದಾಖಲೆಗಳನ್ನು ಕೆಎಸ್‌ಆರ್‌ಟಿಸಿ., ಅಧಿಕಾರಿಗಳು ಪರಿಶೀಲನೆಗೆ ಕೇಳಿದಾಗ ಪ್ರಸ್ತುತಪಡಿಸಬೇಕಾಗಿರುತ್ತದೆ.

106) ಆಯ್ಕೆಯಾದ ಪರವಾನಿಗೆದಾರರು ಮಳಿಗೆಯ ಮುಂದೆ ಸಾರ್ವಜನಿಕರಿಗೆ ಕಾಣುವ ರೀತಿ ಎಂ.ಆರ್.ಪಿ.ಗಿಂತ ಹೆಚ್ಚಿನ ದರ ವಿಧಿಸಲಾಗುವುದಿಲ್ಲವೆಂಬ ಫಲಕವನ್ನು ಅಳವಡಿಸುವುದು.

107) ಮಳಿಗೆಗಳು/ಸೈಕಲ್/ಸ್ಕೂಟರ್ ನಿಲ್ದಾಣ ನಡೆಸಲು ಆಯ್ಕೆಯಾದ ಪರವಾನಿಗೆದಾರರು ಅಗತ್ಯವಿರುವ ಎಲ್ಲಾ ಪರವಾನಿಗೆ/ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆದುಕೊಂಡು ವ್ಯವಹಾರ ನಡೆಸುವುದು.

108) ಆಯ್ಕೆಯಾಗಿ ಕರಾರು ಮಾಡಿಕೊಂಡಿರುವ ಉಪಹಾರ ಗೃಹಗಳ ಪರವಾನಗಿಯನ್ನು ಮತ್ತೊಂದು ಅವಧಿಗೆ ಮಾತ್ರ(05+05 ವರ್ಷಗಳು) ನವೀಕರಣಕ್ಕೆ ಅವಕಾಶ ಕಲ್ಪಿಸಲಾಗುವುದು. ಸದರಿ ಪರವಾನಗಿದಾರರ ಮನವಿ ಮೇರೆಗೆ, ಪರವಾನಗಿ ಅವಧಿಯಲ್ಲಿನ ಉಪಹಾರಗೃಹದ ನಿರ್ವಹಣೆಯ ಗುಣಮಟ್ಟ ಮತ್ತು ಮಾಸಿಕ ಪರವಾನಗಿ ಶುಲ್ಕ ಪಾವತಿಯನ್ನು ಪರಿಗಣಿಸಿ, ಪರವಾನಗಿ ಶುಲ್ಕದಲ್ಲಿ 6ನೇ ವರ್ಷದಲ್ಲಿ ಶೇ.15ರಷ್ಟು ಹಾಗೂ ತದನಂತರ ಪ್ರತಿವರ್ಷ ಶೇ.10ರಷ್ಟು ಹೆಚ್ಚಳದ ಷರತ್ತಿನೊಂದಿಗೆ 5ವರ್ಷಗಳಿಗೆ ನವೀಕರಿಸಲಾಗುವುದು. ಉಪಹಾರಗೃಹ ಪರವಾನಗಿದಾರರು ನವೀಕರಣಕ್ಕೆ ಇಚ್ಛಿಸಿದ್ದಲ್ಲಿ, 6ತಿಂಗಳ ಮುಂಚಿತವಾಗಿ ಮನವಿ ಸಲ್ಲಿಸಬೇಕು. ಕರಾರು ನವೀಕರಣದ ತೀರ್ಮಾನದ ಹಕ್ಕನ್ನು ನಿಗಮವು ಕಾಯ್ದಿರಿಸಿದೆ.

109) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗೆ ನಿಗದಿಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಸುವುದು ಸದರಿ ಸಮಯದಲ್ಲಿ ಉಂಟಾಗುವ ಯಾವುದೇ ತಾಂತ್ರಿಕ ದೋಷಗಳಿಗೆ ಕ.ರಾ.ರ.ಸಾ.ನಿಗಮವು ಜವಾಬ್ದಾರಿಯಾಗಿರುವುದಿಲ್ಲ.

110) ಆಯ್ಕೆಯಾದ ಪರವಾನಗಿದಾರರು ಕಡ್ಡಾಯವಾಗಿ ಮಳಿಗೆಯಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾವನ್ನು ಅಳವಡಿಸಿಕೊಳ್ಳುವುದು.

111) ತೆರೆದ ಸ್ಥಳ ಮಳಿಗೆಗಳಿಗೆ ಹಾಲಿ 03 ವರ್ಷಗಳ ಪರವಾನಗಿ ಅವಧಿಯಲ್ಲಿ ಯಾವುದೇ ಡಿಫಾಲ್ಟರ್ ಆಗಿರದೆ ಮಳಿಗೆಯ ಕಾರ್ಯನಿರ್ವಹಣೆ ತೃಪ್ತಿಕರವಾಗಿದ್ದಲ್ಲಿ, 4ನೇ ವರ್ಷದಲ್ಲಿ ಶೇ.15ರಷ್ಟು ಹಾಗೂ ತದನಂತರ ಪ್ರತಿ ವರ್ಷ

ಶೇ.10ರಷ್ಟು ಪರವಾನಗಿ ಶುಲ್ಕ ಹೆಚ್ಚಳದೊಂದೊಗೆ ತೆರೆದ ಸ್ಥಳದ ವಾಣಿಜ್ಯ ಮಳಿಗೆಗಳಿಗೆ 03 ವರ್ಷಗಳ ಅವಧಿಗೆ ಪರವಾನಗಿ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗುವುದು.

112) ಮೇಲ್ಕಂಡಂತೆ ನವೀಕರಣಕ್ಕೆ ಪರವಾನಗಿದಾರರು ಇಚ್ಛಿಸಿದಲ್ಲಿ, 06 ತಿಂಗಳು ಮುಂಚಿತವಾಗಿ ಮನವಿ ಸಲ್ಲಿಸಬೇಕು. ಕರಾರು ನವೀಕರಣದ ಬಗ್ಗೆ ತೀರ್ಮಾನದ ಹಕ್ಕನ್ನು ನಿಗಮವು ಕಾಯ್ದಿರಿಸಿದ್ದು, ನವೀಕರಣದ ಸಮಯದಲ್ಲಿ ಕೇಂದ್ರ ಕಛೇರಿಯ ವಾಣಿಜ್ಯ ಇಲಾಖೆಯ ಮುಖ್ಯಸ್ಥರ ಅನುಮೋದನೆ ಪಡೆದ ನಂತರವಷ್ಟೇ ಮುಂದುವರೆಸಲು ಅವಕಾಶವಿರುತ್ತದೆ.

ಮುಂದುವರೆದಂತೆ-10



113) ರಾಮನಗರ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ ಇ-ಟೆಂಡರ್ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಂಬಂಧ ದಿ:27.08.2021ರಂದು ಇ-ಟೆಂಡರ್ ನಡೆಸಲು ನಿಗದಿಪಡಿಸಲಾಗಿರುತ್ತದೆ. ದಿ:05.08.2021 ರಿಂದ ಇ-ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.inನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ:25.08.2021ರ ಮಧ್ಯಾಹ್ನ 14:00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ). ಇ-ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಹಾಗೂ ಅರ್ಜಿ ಶುಲ್ಕ, ಇಎಂಡಿ., ಶುಲ್ಕದ ಮೂಲ ಡಿ.ಡಿ.ಗಳನ್ನು ರಾಮನಗರ ವಿಭಾಗೀಯ ಕಛೇರಿಗೆ ದಿ:26.08.2021ರ ಸಮಯ 10:00 ರಿಂದ 26.08.2021ರ ಸಮಯ 17:00 ರವರೆಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ-562139ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂ.ಸಂ: 27272306 ಹಾಗೂ ಮೊಬೈಲ್ ಸಂ:77609 90852. ಇ-ಟೆಂಡರನ್ನು ನಡೆಸುವ ಮತ್ತು ರದ್ದುಪಡಿಸುವ ಹಾಗೂ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಮಾರ್ಪಡಿಸುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ:ರಾಮನಗರ